ನಾಗಚಂದ್ರನ ರಾಮಾಯಣ ಎತ್ತಿಕೊಂಡು ರಾವಣಾಸುರನ ಬಗ್ಗೆ ಹೇಳುತ್ತ ಹೇಳುತ್ತ, ನಾವೂ ಕೂಡ ಇದೇ ಈ ಶತಮಾನದಲ್ಲಿ ಒಬ್ಬ ರಾವಣಾಸುರನ ಬಗ್ಗೆ ಕೇಳಿದ್ದೇವಲ್ಲ ಅವನ ಹೆಸರು ಹಿಟ್ಲರಾಸುರ! ಎನ್ನುವಂತಹ ಅವರ ಪಂಚ್‌ಡಯಲಾಗ್‌ಗೇ ಹುಡುಗರು ಮರುಳಾಗಿಬಿಡುತ್ತಿದ್ದರು.

ಈ ಎಲ್ಲ ಖುಷಿಯ ದಿನಗಳು ನಿವೃತ್ತಿಯೊಂದಿಗೆ ಕಳೆದೇ ಹೋಗಿತ್ತು. ಖಾಸಗಿ ಕಾಲೇಜು. ಉದ್ಯೋಗದಲ್ಲಿದ್ದಾಗ ಕೊಟ್ಟಷ್ಟೆ ಸಂಬಳ, ನಂತರ ಮ್ಯಾನೇಜ್‌ಮೆಂಟಿನವರು ನಿವೃತ್ತಿಯ ದಿನ ಖುಷಿಯಿಂದ ಕೊಡಮಾಡಿದ ಇಪ್ಪತ್ತೈದು ಸಾವಿರ ರೂಪಾಯಿ, (ಜೊತೆಗೆ ಹಾರ, ಹಣ್ಣು, ಒಂದಿಷ್ಟು ಹೊಗಳಿಕೆಯ ಮಾತುಗಳು) ಹಳ್ಳಿಯಲ್ಲಿ ಉಳಿದ ಚೂರುಪಾರು ಆಸ್ತಿ, ಉದ್ಯೋಗ ಮಾಡುವಾಗ ಸಂಬಳದಲ್ಲಿ ಉಳಿಸಿದ ಒಂದಿಷ್ಟು ದುಡ್ಡು. ಅಷ್ಟೇ ಅವರ ಆಸ್ತಿ. ಮಗನೂ ಅಂಥ ಬುದ್ಧಿವಂತನಲ್ಲವಾದ್ದರಿಂದ ಅಂತೂ ತೇರ್ಗಡೆ ಅಂಕಗಳಿಸಿ ಬಿ.ಕಾಂ. ಮುಗಿಸಿದನಾದರೂ ನೌಕರಿ ಸಿಗಲಿಲ್ಲ. ತಮ್ಮ ಹೆಸರಿನಿಂದಾಗಿ ಎಲ್ಲಾದರೂ ಸಿಕ್ಕೀತೇನೊ ಅಂತ ನಾಲ್ಕಾರು ಕಡೆಗೆ ಎಡತಾಕಿದರು. ಅಂಗಡಿ ಮುಂಗಟ್ಟುಗಳಲ್ಲಿ ಬೆಳಗಿನಿಂದ ಸಂಜೆವರೆಗೂ ದುಡಿಸಿಕೊಂಡು ಐನೂರೋ ಸಾವಿರವೋ ಕೊಡಲು ಬಂದರೆ ಆ ಕೆಲಸಕ್ಕೆ ಕಳಿಸಲು ಅವರಿಗು ಸರಿಯೆನ್ನಿಸಲಿಲ್ಲ, ಮಗನೂ ಒಪ್ಪಲಿಲ್ಲ. ಕಡೆಗೆ ಅವರ ಕೈ ಹಿಡಿದಿದ್ದು ಮೊದಲಿನಿಂದ ನಂಬಿಕೊಂಡು ಬಂದ ಅವರ ಮಠವೇ. ಮಠದಲ್ಲಿ ಲೆಕ್ಕಾಚಾರದ ನಿರ್ವಹಣೆ ಮಾಡುತ್ತಿದ್ದ ಒಬ್ಬಾತ ಆಕ್ಸಿಡೆಂಟಿನಲ್ಲಿ ತೀರಿಕೊಂಡು ಹುದ್ದೆ ಖಾಲಿಯಾದಾಗ ಸ್ವಾಮಿಗಳ ಕಾಲು ಹಿಡಿದು ಆ ಕೆಲಸವನ್ನ ಮಗನಿಗೆ ಕೊಡಿಸುವಲ್ಲಿ ಯಶಸ್ವಿಯಾಗಿದ್ದರು. ಮತ್ತೆ ನಾಲ್ಕಾರು ವರ್ಷ ಅವರದು ಸುಖದ ಜೀವನವೇ.

★★★

ಭಟ್ಟರಿಗೆ ಕಾವ್ಯಗಳಲ್ಲಿ ಕರುಣರಸದ ಭಾಗಗಳೆ ಇಷ್ಟವಾಗಿದ್ದವು. ಅದರಲ್ಲೂ ಈಗಿನ ಕೆಲವು ದಿನಗಳಲ್ಲಿ ಅದೆ ಹೆಚ್ಚು ಆಪ್ತ ಎನ್ನಿಸುತ್ತಿರುವುದಕ್ಕೆ ಕಾರಣ ತನ್ನ ನೊಂದಮನಸ್ಸೇ ಇರಬಹುದೆ ಎನ್ನುವ ಯೋಚನೆಯು ಕಾಡುತ್ತಿತ್ತು. ಅದಕ್ಕೆ 'ಚಂದ್ರಮತಿಯ ಪ್ರಲಾಪ' ಓದಬೇಕೆನ್ನಿಸಿ 'ಹರಿಶ್ಚಂದ್ರ ಕಾವ್ಯ'ಕ್ಕಾಗಿ ತಡಕಾಡಿದ್ದು. ಇವತ್ತು ತರಿಸಿಟ್ಟುಕೊಂಡ ಪುಸ್ತಕಗಳಲ್ಲಿ ಅದು ಇಲ್ಲ. ಮೇಜಿನಾಚೆ ತುದಿಯಲ್ಲಿ ಎರಡು ಪುಸ್ತಕ ಇವೆಯಲ್ಲ, ಅವು ಯಾವವು ಎಂದುಕೊಳ್ಳುತ್ತ ಎಳೆದರೆ, ತುದಿಯಲ್ಲಿಟ್ಟಿದ್ದ ನೀರಿನ ಗ್ಲಾಸು ಜಾರಿ ಟೈಲ್ಸ್ ಮೇಲೆ ಬಿದ್ದು ಠಳ್ ಎಂದು ಪುಡಿಪುಡಿಯಾಯಿತು. ರುಕ್ಮಿಣಿ ಒಳಗಿನಿಂದ ಓಡಿಬಂದಳು. ಈ ಗಡಿಬಿಡಿಯಲ್ಲಿ ತಿಳಿಯದೆ ಏಳಹೋಗಿ ನೋವಾದ ಕಾಲಿನ ಮೇಲೇ ಒತ್ತಡ ಬಿದ್ದು ಚುಳುಕ್ ಎಂದದ್ದರಿಂದ – 'ಗ್ಲಾಸು ಕಣೆ, ಹತ್ತಿರ ಬರಬೇಡ, ಕಾಲಿಗೆ ಚುಚ್ಚೀತು' ಎಂದು ನೋವಿನಿಂದಲೆ ಕೂಗಿದರು. 'ಏನಾದರೂ ಬೇಕಾದರೆ ಕೂಗಿ ಹೇಳಿದ್ದರೆ ನಾನು ತೆಗೆದುಕೊಡುತ್ತಿರಲಿಲ್ಲವಾ' ಎಂದಷ್ಟೆ ಹೇಳಿದ ರುಕ್ಮಿಣಿ, ಗ್ಲಾಸಿನ ಚೂರನ್ನ ತೆಗೆಯಲು ಹಿಡಿ ತರಲು ಒಳಗೆ ಹೋದಳು. ಮತ್ತೆ ನಿಧಾನಕ್ಕೆ ತಿರುಗಿ ಸ್ವಸ್ಥವಾಗಿ ಕುಳಿತ ಭಟ್ಟರಿಗೆ ತಾನೇ ತನ್ನ ಕುರಿತು ಯೋಚಿಸುತ್ತಿದ್ದೆ ಎನ್ನುವುದು ಮರೆತು ಹೋಯಿತು. ಪ್ರಾಯಶಃ ಬದುಕಿನ ಘಟನೆಗಳೆ ಹಾಗೆ, ಒಂದನ್ನ ಮರೆಸಲು ಇನ್ನೊಂದು ಆಘಾತವೇ ಬರಬೇಕೇನೋ.

ಓದಿನಲ್ಲಿ ದಡ್ಡನಾದರೂ ವ್ಯವಹಾರದಲ್ಲಿ ಜಾಣ ಮಗ ಕಾರ್ತೀಕ. ಮಠದಲ್ಲಿ ಬಹಳ ಬೇಗ ಮೇಲಕ್ಕೆ ಬಂದ. ಇಳಿವಯಸ್ಸಿನಲ್ಲಿಯೂ ಭಟ್ಟರ ಉಮೇದು ಮುಂಗಾರಿನಲ್ಲಿ ಗರಿಬಿಚ್ಚಿ ಕುಣಿವ ನವಿಲಿನಂತಾಯಿತು. ಮೇಲು ಮೇಲಕ್ಕೆ ಹೋದ ಕಾರ್ತೀಕ ಮಠದ ವಿವಿಧ ಹುದ್ದೆಗಳನ್ನ ಅಲಂಕರಿಸುವ ಮಟ್ಟಕ್ಕೆ ಬೆಳೆದು ನಿಂತ. ಆಗೆಲ್ಲ ತಿಂಗಳಿಗೊಂದಾವರ್ತಿ ಭಟ್ಟರೂ ಮಠಕ್ಕೆ ಹೋಗುವುದಿತ್ತು. ನವರಾತ್ರಿ, ಶಂಕರಪಂಚಮಿ ಮುಂತಾದ ವಿಶೇಷ ದಿನಗಳಲ್ಲಂತೂ ಅಲ್ಲೇ ಸೇವೆ... ಕಾರ್ತೀಕನ ತಂದೆ ಅಂತಲೋ ಗುರುಗಳ ಆಪ್ತರು ಅಂತಲೋ ಅವರಿಗಲ್ಲಿ ಗೌರವದ ಸ್ಥಾನ. ಗುರುಗಳ ಸನ್ನಿಧಿಯಲ್ಲಿಯೇ